# ಚಿತ್ರದುರ್ಗದಲ್ಲೊಂದು ಜಲಪಾತ!

ವರುಣನ ಕೃಪೆಯಿಂದ ನಾಡಿನ ಕೆರೆಕಟ್ಟೆಗಳೆಲ್ಲವೂ ಈ ವರ್ಷ ತುಂಬಿ ಹರಿಯುತ್ತಿವೆ. ಹೀಗಾಗಿ ಬಯಲು ಸೀಮೆಯಲ್ಲೂ ಮಲೆನಾಡಿನಂತೆ ಝರಿ, ಜಲಪಾತಗಳು ಮೈದುಂಬಿ ನಳನಳಿಸುತ್ತಿವೆ. ಚಿತ್ರದುರ್ಗದ ಹೊಸದುರ್ಗ ಬಳಿಯಲ್ಲಿ 'ಸಿಂಹಾದ್ರಿ' ಜಲಪಾತವೊಂದು ಮೈದಳೆದು, ಸುತ್ತಮುತ್ತಲಿನ ಜನರನ್ನು ತನ್ನತ್ತ ಸೆಳೆಯುತ್ತಿದೆ. ಸುಪ್ರಸಿದ್ಧ ಹಾಲು ರಾಮೇಶ್ವರ ಕ್ಷೇತ್ರದ ಸಮೀಪದ ಬಂಡೆಯ ಮೇಲಿರುವ ಕೆರೆ ಈ ವರ್ಷ ತುಂಬಿ ಹರಿಯುತ್ತಿರುವುದು ಈ ಜಲಪಾತಕ್ಕೆ ಜೀವ ಕಳೆ ತುಂಬಲು ಕಾರಣ. ಹೊಸದುರ್ಗ–ಹಾಲು ರಾಮೇಶ್ವರ ಮುಖ್ಯರಸ್ತೆಯಲ್ಲಿರುವ ಹಕ್ಕಿ ತಿಮ್ಮಯ್ಯನ ಹಟ್ಟಿ ಎಂಬ ಹಳ್ಳಿಯಿಂದ ಸುಮಾರು 6 ಕಿ.ಮೀ. ದೂರದಲ್ಲಿ ಈ ಜಲಪಾತವಿದೆ. ಈ ಪೈಕಿ ಸುಮಾರು 3 ಕಿ.ಮೀ. ಮಾರ್ಗವನ್ನು ಚಾರಣದ ಮೂಲಕವೇ ಕ್ರಮಿಸಬೇಕು. ಸ್ವಲ್ಪ ಕಡಿದಾದ ಬಂಡೆ ಬೆಟ್ಟವನ್ನು ಏರಿ ಇಳಿದರೆ ಹಾಲ್ನೊರೆಯಂತೆ ಧುಮ್ಮಿಕ್ಕುವ ಈ ಪುಟ್ಟ ಜಲಪಾತ ಕಾಣಸುತ್ತದೆ. ಬಿಸಿಲ ತಾಪಕ್ಕೆ ಮೈಯೊಡ್ಡಿ ಕೂರಬಹುದಾದ ಈ ಜಲಪಾತವನ್ನು ನೋಡಲು, ನೀರಾಟದ ಆನಂದ ಸವಿಯಲು ಜನಸಾಗರವೇ ಹರಿದು ಬರುತ್ತಿದೆ. ಆಗೊಮ್ಮೆ ಈಗೊಮ್ಮೆ ಮಳೆಗಾಲದಲ್ಲಿ ಮಾತ್ರ ಕಾಣಿಸಿಕೊಳ್ಳುವ ಈ ಜಲಪಾತವು ಬೇಸಿಗೆಯಲ್ಲಿ ಕಣ್ಮರೆಯಾಗುತ್ತದೆ.

–ಎಚ್.ಎಸ್. ನವೀನ ಕುಮಾರ್, ಹೊಸದುರ್ಗ





# ಪೊರಕೆಗೆ ಪ್ಲಾಸ್ಟಿಕ್ ಬಾಟಲಿ ಹಿಡಿಕೆ

ಹೆಚ್ಚಿನ ಜನರಿಗೆ ಪ್ಲಾಸ್ಟಿಕ್ ಬಾಟಲಿಗಳು ಉಪಯುಕ್ತ ಎನಿಸುವುದೇ ಇಲ್ಲ. ಅಲ್ಲೊಬ್ಬರು ಇಲ್ಲೊಬ್ಬರು ಎಂಬಂತೆ ಪ್ಲಾಸ್ಟಿಕ್ ಬಾಟಲಿಗಳನ್ನು ಸೃಜನಶೀಲವಾಗಿ ಬಳಸಿಕೊಳ್ಳುತ್ತಾರೆ. ಶೃಂಗೇರಿಯ ಕೆರೆಮನೆ ದಿನೇಶ್ ಅವರು ತಾವು ಬಳಸುವ ತೆಂಗಿನ ಪೊರಕೆಗಳಿಗೆ ಹಿಡಿಕೆಯಾಗಿ ನಿರುಪಯುಕ್ತ ಪ್ಲಾಸ್ಟಿಕ್ ಬಾಟಲಿಗಳನ್ನು ಬಳಸಿರುವುದು ವಿಶೇಷ. ತೆಂಗಿನ ಗರಿಗಳಿಂದ ಮಾಡಿದ ಕಸ ಪೊರಕೆಯ ಹಿಡಿಕೆಗೆ ಪ್ಲಾಸ್ಟಿಕ್ ಅಥವಾ ಸೆಣಬಿನ ದಾರ ಕಟ್ಟುವುದರ ಅಥವಾ ಉದ್ದನೆಯ ಬಟ್ಟೆಯನ್ನು ಕಟ್ಟುವುದರ ಬದಲಿಗೆ ಪ್ಲಾಸ್ಟಿಕ್ ಬಾಟಲಿಗಳನ್ನು ಬಳಸಬಹುದು. ಬುಡದಲ್ಲಿ ರಂಧ್ರವನ್ನು ಕೊರೆದು ಅಲ್ಲಿಗೆ ಹಿಡಿಕಡ್ಡಿಗಳನ್ನು ತೂರಿಸಿ, ಭರ್ತಿ ಮಾಡಿ, ನಂತರ ಸ್ವಲ್ಪ ಬೆಂಕಿಯಲ್ಲಿ ಕಾಯಿಸಿದರೆ ಸಾಕು ಪ್ಲಾಸ್ಟಿಕ್ ಹಿಡಿಕೆಯುಳ್ಳ ಪೊರಕೆ ತಯಾರಾಗುತ್ತದೆ. ಈ ರೀತಿಯ ಹೊಸ ಪ್ರಯೋಗದ ಉಪಯೋಗವೆಂದರೆ ಪ್ರತಿ ಬಾರಿ ನೆಲಕ್ಕೂ ಅಥವಾ ಗೋಡೆಗೆ ಕುಟ್ಟಿ ಕಡ್ಡಿಗಳನ್ನು ಸರಿಪಡಿಸಿಕೊಳ್ಳಬೇಕಾದ ಅಗತ್ಯವಿಲ್ಲ, ಕಸ ಗುಡಿಸಬೇಕಾದರೆ ಕೈ ನೋಯುವುದಿಲ್ಲ ಮತ್ತು ಬೇಗ ಬೇಗ ಗುಡಿಸಬಹುದು. ಹರಡಿಕೊಳ್ಳುತ್ತಿದ್ದ ಪೊರಕೆಯ ಕಡ್ಡಿಗಳು ಈ ವಿಧಾನದಿಂದ ಕೂಡಿಕೊಂಡಿರುತ್ತದೆ.

–ಶ್ರೀರಘುನಂದನ, ಕೆರೆಮನೆ

# ಕೃಷ್ಣನ ಕಿರೀಟ

ಇದು ಕೃಷ್ಣನ ಕಿರೀಟ ಎಂದೇ ಖ್ಯಾತಿಯಾದ ಶ್ವೇತಧವಲ ಹೂವು. ತಾವರೆಯ ಬಳ್ಳಿಯಂತೆ ನೀಳವಾಗಿರುವ ಇದರ ಗಿಡ ಬೆಳೆಯಲು ನೀರು ನಿಲ್ಲುವ ತೊಟ್ಟಿ ಬೇಕು. ಗಿಡದ ಒಂದು ತೊಟ್ಟಿನಲ್ಲಿ ಐದಾರು ಹೂಗಳಿರುತ್ತವೆ. ಪ್ರತಿ ಹೂವಿನ ಒಂದು ದಳದಲ್ಲಿ ನವಿಲುಗರಿಯ ಚಿತ್ರವನ್ನು ನಿಸರ್ಗ ಗಾಢವಾಗಿ ಅಚ್ಚೊತ್ತಿದೆ. ಈ ಶ್ವೇತಧವಲ ಹೂವಿನ ಗಿಡ ಬೆಳ್ತಂಗಡಿ ತಾಲ್ಲೂಕಿನ ಬದ್ಯಾರಿನ ಮನೆಯೊಂದರ ಮುಂದೆ ಕಂಡ ಪರಿಯಿದು.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ

